# ನವಿಲುಗನ್ನಡಿ

- ಮಹಿಳಾ ಸಂಚಿಕೆಯ 'ಭಾರತಿ ಭಾರತ' ವಿಶಿಷ್ಟವಾಗಿದೆ. ಮಳಯಾಳಂ ಕಾವ್ಯಮಂಜರಿ ಅತ್ಯಾಕರ್ಷಕ. ಸಂಧ್ಯಾ ಇ ಅವರ 'ಕನಸುಗಳೇ ಇಲ್ಲದವನನ್ನು... ಖಂಡಿತ ಮದುವೆಯಾಗಬಾರದು' ಮನ ಮುಟ್ಟಿತು. ಮೈತ್ರೇಯಿ ಗದಿಗೆಪ್ಪಗೌಡರ ಕಥೆ 'ಗೆಜ್ಜೆಟೀಕಿ ಮುತ್ತಿನ ಬುಗುಡಿ' ಭಾಷೆಯ ಸೊಗಡಿನಿಂದ ಹಾಗೂ ಶ್ರುತಿ ಬಿ.ಆರ್. ಅವರ 'ದೇವರು ಬಂತು' ಸರಳ ಕಥಾವಸ್ತುವಿನ ಮೂಲಕ ಗಮನಸೆಳೆದವು.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಭಾರತಿ–ಭಾರತಿ ಲೇಖನದಲ್ಲಿ ಅನಘ ಕೋಲತ್ ಹೇಳಿರುವ, 'ಕಾವ್ಯವು ಭಾಷೆಯನ್ನು ಮೀರಿದ್ದು... ಕಥೆಗಳೆಂದರೆ ಭಾಷೆ ಮತ್ತು ವ್ಯಾಕರಣಗಳ ನೇಯ್ಗೆಯ ಕುಶಲತೆಯಲ್ಲಿ ಅರಳಿದ ಕೃತಿಗಳು...' ಎಂಬ ಮಾತು ಸಾಹಿತ್ಯದ ಸಾರವನ್ನೇ ಒಟ್ಟಾಗಿ ಹೇಳಿದಂತಿದೆ.

**ಬಿ.ಎಸ್. ನಾಗರಾಜ್, ಶಿವಮೊಗ್ಗ**

- 'ಭಾರತಿ ಭಾರತ'ದ ಸಂದರ್ಶನಗಳಲ್ಲಿ ವ್ಯಕ್ತವಾದ ಎಲ್ಲಾ ವಿಚಾರಗಳೂ ಸಮಯೋಚಿತ. ಲೇಖಕರು ಸಮಾಜವನ್ನು ನೋಡುವ ದೃಷ್ಟಿಕೋನಗಳನ್ನೂ ಸಂದರ್ಶನಗಳಲ್ಲಿ ಹಿಡಿದಿಟ್ಟಿರುವುದು ಅರ್ಥಪೂರ್ಣವಾಗಿದೆ. ಎಂಟು ಪ್ರಶ್ನೆಗಳಿಗೆ ಇವರು ನೀಡಿರುವ ಉತ್ತರಗಳು ಅಮೋಘ. ಕೇರಳದ ಅನಘ ಅವರ ಕನ್ನಡಪ್ರೇಮ ಸಂತೋಷ ನೀಡಿತು.


**ಶಂಕರನಾರಾಯಣ ಭಟ್, ಮಾಡಗೇರಿ**

**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

- 'ಭಾರತಿ ಭಾರತ' ಓದಿದಾಗ ಅನಿಸಿದ್ದು ಇಷ್ಟೆ– ಭಾಷೆ, ಪ್ರದೇಶ, ವರ್ಗ ಯಾವುದೇ ಇರಲಿ, ಪ್ರಪಂಚದ ಯಾವುದೇ ಮೂಲೆಗೆ ಹೋದರೂ ಹೆಣ್ಣಿನ ಮನದ ಮಿಡಿತ ಒಂದೇ ಆಗಿರುತ್ತದೆ.

**ರಾಮಚಂದ್ರ ಗೆದ್ದಣ್ಣವರ**

- ಸಂಧ್ಯಾ.ಇ. ಹಾಗೂ ಬಿಂದು ಕೃಷ್ಣನ್




ಮಲಯಾಳಂ ಪದ್ಯಗಳು ಸ್ತ್ರೀ ಬದುಕನ್ನು ವಿಭಿನ್ನ ನೆಲೆಗಟ್ಟಿನಲ್ಲಿ ತೆರೆದಿಟ್ಟಿವೆ. ಪದ್ಯಗಳು ಆಪ್ತವಾಗಿವೆ. 'ಸತ್ತವನ ಸಂಗಡ ಬದುಕಬೇಕಾಗಿ ಬರುತ್ತದೆ... ಆತ್ಮಹತ್ಯೆ ಮಾಡಿಕೊಳ್ಳುವವರೆಗೆ...' ಸಾಲುಗಳು ಅದ್ಭುತ ಅಭಿವ್ಯಕ್ತಿಯೆನಿಸಿದವು.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**

- ಎಚ್. ಸಿ.ಭವ್ಯ ನವೀನ್ ಅವರ 'ಚರಿತ್ರೆ' ಹಾಗೂ ಲಲಿತಾ ಸಿದ್ಧಬಸವಯ್ಯ ಅವರ 'ಕರ್ತರಿ ಕರ್ಮಣಿ' ಕವಿತೆಗಳು ಅರ್ಥಪೂರ್ಣವಾಗಿದ್ದವು.

**ಶಾಂತಲಾ ರಾಜಗೋಪಾಲ್, ಬೆಂಗಳೂರು**

- 'ಪಿಯಾನೊ' (ಮೂಲ: ಅನೀಬಾಲ್ ಮೊಂತೆರೊ ಮಚಾದೊ ಕನ್ನಡಕ್ಕೆ: ಗೋಪಾಲಕೃಷ್ಣ ಪೈ) ಈ ಸಂಚಿಕೆಯ ಅತ್ಯಂತ ಮಹತ್ವದ ಕಥೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- 'ಮೇರುನಟನ ಕೈ ಜಾರಿದ ರಾಜಗುರು' ಅನುಪಮಾ ಪ್ರಸಾದ್ ಅವರ ಕಥೆ ಬೇರೆಬೇರೆ ಆಯಾಮಗಳಲ್ಲಿ ತನ್ನ ಹೊಳಹುಗಳನ್ನು ಬಿಟ್ಟುಕೊಡುತ್ತ ಹೋಗುತ್ತದೆ. ಕಥೆ ಮುಗಿದ ಮೇಲೂ ಓದುಗನೊಳಗೆ ಬೆಳೆಯುತ್ತ ಹೋಗುತ್ತದೆ.

**ಕಲ್ಲೇಶ್ ಕುಂಬಾರ್, ಹಾರೂಗೇರಿ**